ಅಧ್ಯಕ್ಷರು :— ಈಗ ಸದನವನ್ನು ಮುಂದೂಡಲಾಗಿದೆ. ಪುನ: ಮೂರುವರೆ ಗಂಟೆಗೆ ಸಮಾವೇಶಗೊಳ್ಳುತ್ತೇವೆ.

(ಸದನವು ಮಧ್ಯಾಹ್ನ 2 ಘಂಟೆ 27 ನಿಮಿಷಕ್ಕೆ ಮುಕ್ತಾಯಗೊಂಡು

ಪುನ: 3. ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು.)

(ಸಭೆಯು 3-40 ನಿಮಿಷಕ್ಕೆ ಪುನ: ಸಮಾವೇಶಗೊಂಡಿತು) (ಸಭಾಧ್ಯಕ್ಷ ಪೀಠವನ್ನು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಎಸ್. ರಮೇಶ್ ಕುಮಾರ್‌ರವರು ಅಲಂಕರಿಸಿದರು)

(ಗ) ಕೆಲವು ಮಂತ್ರಿಗಳು ತಮ್ಮ ಪದವಿಗಳಿಗೆ ರಾಜೀನಾಮೆ ನೀಡಿರುವ ಬಗ್ಗೆ ವದಂತಿ.

ಶ್ರೀ ಯು.ಆರ್. ಸಭಾಪತಿ :— ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಕೆಲವು ಜನ ಮಾನ್ಯ ಸಚಿವರುಗಳು ಹಾಗೂ ಕೆಲವರು ಮಾನ್ಯ ಸದಸ್ಯರುಗಳು ಕಾಣಿಸುತ್ತಾ ಇಲ್ಲ. ಮಾನ್ಯ ಸಚಿವರುಗಳು ಕೆಲವರು ತಮ್ಮ ಮಂತ್ರಿ ಪದವಿಯಲ್ಲಿದ್ದಾರೋ ಇಲ್ಲವೋ ಎಂಬುದು ನಮಗೆ ತಿಳಿಯುತ್ತಿಲ್ಲ. ತಮಗೆ ಏನಾದರೂ ಮಾಹಿತಿಗಳು ಇದ್ದಲ್ಲಿ ಯಾವ ಯಾವ ಮಾನ್ಯ ಸಚಿವರು ರಾಜೀನಾಮೆ ಕೊಟ್ಟಿದ್ದಾರೆ ಎಂಬುದನ್ನು ನಮಗೆ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇವೆ.

ಅಧ್ಯಕ್ಷರು :— ಮಾನ್ಯ ಸಚಿವರುಗಳು ರಾಜೀನಾಮೆ ಕೊಟ್ಟರೆ ಮಾನ್ಯ ಮುಖ್ಯಮಂತ್ರಿಗಳವರಿಗೆ ಮತ್ತು ರಾಜ್ಯಪಾಲರಿಗೆ ಗೊತ್ತಾಗುತ್ತದೆ. ಮಾನ್ಯ ಸದಸ್ಯರುಗಳು ರಾಜೀನಾಮೇ ಕೊಟ್ಟರೆ ನನಗೆ ಗೊತ್ತಾಗುತ್ತದೆ. ಸಭಾಧ್ಯಕ್ಷರಾಗಿ ನನಗೆ ಯಾರೂ, ಯಾವ ಮಂತ್ರಿಗಳೂ ರಾಜೀನಾಮೆ ಕೊಟ್ಟಿಲ್ಲ. ಆದುದರಿಂದ ನಮ್ಮ ಕಲಾಪಗಳನ್ನು ಮುಂದುವರಿಸೋಣ. ಈ ಬಿಲ್ ತೆಗೆದುಕೊಂಡು ಆದ ಮೇಲೆ ಮಾನ್ಯ ರೆಡ್ಡಿಯವರ ಭಾಷಣವನ್ನು ಪ್ರಾರಂಭಿಸೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಎಂ.ಎಸ್. ಪಾಟೀಲರು ಈಗ ಒಂದು ತಿದ್ದುಪಡಿಯನ್ನು ತಂದಿದ್ದಾರೆ, ಆದರೆ, ಅವರು 10ನೇ ತಾರೀಖಿನ ನಂತರ ಸಮಾನ ಮನಸ್ಕರ ಜೊತೆ ಸೇರಿ ಬೇರೊಂದು ಪಕ್ಷಕ್ಕೆ ಸೇರಬೇಕೆಂದು ನಿರ್ಣಯ ತೆಗೆದುಕೊಂಡ ಮೇಲೆ ಕೇವಲ 4 ದಿವಸಕ್ಕಾಗಿ ಈ ಹಂತದಲ್ಲಿ ಈ ಬಿಲ್ಲನ್ನು ಯಾಕೆ ತರಬೇಕಾಗಿತ್ತು? ಮುಂದೆ ಬರುವ ಸರ್ಕಾರಗಳು ಈ ಬಗ್ಗೆ ಕೆಲಸ ಮಾಡಲಿ ಎಂದು ತಂದರು ಇದರಿಂದೇನೂ ಪ್ರಯೋಜನವೂ ಆಗುವುದಿಲ್ಲ; ಅವರ ಉದ್ದೇಶ ಸಫಲವೂ ಆಗುವುದಿಲ್ಲ, ಮಾನ್ಯ ರಾಜ್ಯಪಾಲರಿಂದ ಅವರ ಅನುಮತಿ ಪಡೆದು ಬರುವವರೆಗೆ ಈ ಪಾರ್ಟಿಯೊಳಗೆ ಅವರು ಇರುವುದೂ ಇಲ್ಲ, ಈ ಸರ್ಕಾರ ಉಳಿಯುವುದೂ ಇಲ್ಲ. ಅವರೇ ಹೊರಗೆ ಹೋದಮೇಲೆ ಸರ್ಕಾರ ಎಲ್ಲಿ ಉಳಿಯುತ್ತದೆ!

ಅಧ್ಯಕ್ಷರು :— ನೀವು ಮಾನ್ಯ ಬೈರೇಗೌಡರು ನಿಮ್ಮ ಮುಂದೆ ಕೂತಿದ್ದಾರೆ ಎನ್ನುವ ವಿಚಾರವನ್ನು ಗಮನಕ್ಕೇ ತೆಗೆದುಕೊಳ್ಳದೆ ಇಷ್ಟೆಲ್ಲ ಮಾತನಾಡುತ್ತಿದ್ದೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಬೈರೇಗೌಡರೇ ಪ್ರೋತ್ಸಾಹ ಇರುವುದು ಅದಕ್ಕೆಲ್ಲ. ಅವರು ಕನ್ವೀನರ್ ಇದ್ದರೂ ನಿಜವಾದ ಕನ್ವೀನರ್ ಮಾನ್ಯ ಬೈರೇಗೌಡರೇ. ಇದಕ್ಕೆ ಕನ್‌ಸೆಂಟ್ ಸಿಗುವ ಮೊದಲೇ ಪಲಾಯನ ಮಾಡುವವರು ಅದನ್ನು ಪಾಸ್ ಮಾಡಿಕೊಡಿ ಅಂದರೆ ಹೇಗೆ?

Mr. Speaker :— Please stand up and come to my rescue. ನಾನೂ ಎಂ.ಎಸ್. ಪಾಟೀಲರೂ ಸಮಾನ ಮನಸ್ಕರಾದುದರಿಂದ ಈ ಬಿಲ್ಲನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಹೆಲ್ಪಲೆಸ್ ಪಾರ್ಟಿ, ನಿಮಗೆ ನೀವೇ ಯಾಕೆ ಲೈಕ್ ಮೈಂಡೆಡ್ ಪಾರ್ಟಿ ಅಂತ ಹೇಳಿಕೊಳ್ಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್ :— ಎಂಎಸ್ ಪಾಟೀಲರು ಇಲ್ಲಿ ಇನ್ನೂ ಮುಂದೆ ಎಲ್ಲಿರುತ್ತಾರೆ ಅಂತ ಒಂದು ಅನುಮಾನ. ಮಾನ್ಯ ಖರ್ಗೆಯವರಿಗೆ ಇರಬಹುದು. ನಾನು ಹೇಳುವುದು ಇನ್ನೆರಡು ತಿಂಗಳಿಗೆ ಮುಂದಿನ ಚುನಾವಣೆ ನಡೆದಾಗ ನೀವೆಲ್ಲಿರುತ್ತೀರಿ? ಆದ್ದರಿಂದ ಈ ಮಸೂದೆ ತರುವ ಮೂಲಕ ನಿಮ್ಮ ಆಶೆ-ಆಶೋತ್ತರಗಳು ಈಡೇರುವುದಾದರೆ ಇದಕ್ಕೆ ಇವತ್ತು ಒಪ್ಪಿಗೆ ಕೊಡೋಣ. ಇತ್ತೀಚಿನ ದಿನಗಳಲ್ಲಿ ನಿಮ್ಮ ಕೂಟಗಳು, ಸಭೆಗಳನ್ನು ನೋಡಿದರೆ ಜನತಾದಳವನ್ನು ಬಿಟ್ಟು ನೀವು ಬಹುದೂರ ಹೋಗುವಂತೆ ಅನ್ನಿಸುತ್ತದೆ.

ಶ್ರೀ ಸಿ. ಬೈರೇಗೌಡ :— ಆ ತರಹದ್ದು ಯಾವುದೂ ಇಲ್ಲ, ನಾವು ಜನತಾದಳದಲ್ಲೇ ಇರಬೇಕೆಂಬುದು ತೀರ್ಮಾನ ಮಾಡಿದ್ದೇವೆ. ನಾವು ಸಮಾನ ಮನಸ್ಕರಿರಬಹುದು, ಅಸಮಾನ ಮನಸ್ಕರಿರಬಹುದು ಇನ್ನೇನೇನೋ ಮನಸ್ಕರಿರಬಹುದು, ಆದರೆ ಜನತಾದಳದಲ್ಲಿರಬೇಕೆಂಬುದು ನಮ್ಮ ಎಲ್ಲರ ಇಚ್ಛೆ ಹಾಗೂ ತೀರ್ಮಾನ ಇದೆ. ಮಾನ್ಯ ಖರ್ಗೆಯವರಿಂದ ಎಷ್ಟು ದೂರ ಇರಬೇಕೆಂದು ನಾವು ಬಯಸುತ್ತೇವೋ ಹಾಗೆಯೇ ಬೇರೆಯವರಿಂದಲೂ ಅಷ್ಟೇ ದೂರ ಇರಬೇಕೆಂದು ನಾವು ಬಯಸುತ್ತಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಬೈರೇಗೌಡರು ಬಹಳ ಮುಖ್ಯವಾದ ವಿಚಾರವನ್ನು ಹೇಳಿದರು, ಮಾನ್ಯ ಖರ್ಗೆಯವರನ್ನು ತೋರಿಸಿ ಎಲ್ಲರಿಂದಲೂ ದೂರ ಇರುತ್ತೇನೆ ಎಂದು ಅಂದರೆ ಜನರಿಂದಲೂ ದೂರನೇ? ಕರ್ನಾಟಕದ ಮತದಾರರಿಂದಲೂ ಅಷ್ಟೇ ದೂರ ಹೋಗಿ ಬಿಟ್ಟಿದ್ದೀರ ನೀವು ಅಂತ ನನಗೆ ಆಶ್ಚರ್ಯ.

ಶ್ರೀ ಸಿ. ಬೈರೇಗೌಡ :— ಯಾರನ್ನು ಎಲ್ಲಿಡಬೇಕೆಂಬುದು ಜನತೆಯ ತೀರ್ಮಾನಕ್ಕೆ ಬಿಟ್ಟದ್ದು. ನಾವು ನೀವು ಅಲ್ಲ.

ಅಧ್ಯಕ್ಷರು :— ಮಾನ್ಯ ವಾಟಾಳ್‌ರವರೇ, ರಾಜಕೀಯ ಗುಂಪುಗಳು ಮೂರಾಗಲಿ-ಮುವತ್ತಾಗಲಿ, ಜನತಾದಳದ ಒಳಗಿನ ವಿದ್ಯಮಾನಗಳು ಅದರ ಅಧ್ಯಕ್ಷ ಶ್ರೀ ಸಿದ್ದರಾಮಯ್ಯನವರಿಗೆ ಗೊತ್ತಿಲ್ಲದೆ ಹೋದರೂ ಕೂಡ ನಿಮಗೆ ಸರ್ವಸ್ವವೂ ಇಂಚು ಇಂಚು ಗೊತ್ತಿರಲಿಕ್ಕೇ ಬೇಕು.

ಶ್ರೀ ವಾಟಾಳ್ ನಾಗರಾಜ್ :— ನಾವಿಬ್ಬರೂ ಸಮಾನ ಮನಸ್ಕರು ತಾನೇ?

ಅಧ್ಯಕ್ಷರು :— ಇಲ್ಲ, ಇಲ್ಲ, ನಾನೂ ಮಾನ್ಯ ಎಂಎಸ್ ಪಾಟೀಲರು ಸಮಾನ ಮನಸ್ಕರು.

ಶ್ರೀ ವಾಟಾಳ್ ನಾಗರಾಜ್ :— ಅದನ್ನು ಒಪ್ಪಲು ನಾನು ತಯಾರಿಲ್ಲ, ನಾವಿಬ್ಬರೂ ಸಮಾನ ಮನಸ್ಕರೆನ್ನುವುದು ಜನಜನಿತ. ನಮಗೆ ಎಂಎಸ್ ಪಾಟೀಲರ ಬಗ್ಗೆ ಅಪಾರವಾದ ಗೌರವ ಇದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮೊನ್ನೆ ಮಾನ್ಯ ವಾಟಾಳ್ ನಾಗರಾಜ್ ಹೇಳಿದರು, ನನ್ನ ಪಕ್ಷಕ್ಕೂ ಸೇರುವವರು ಇದ್ದಾರೆ ಅಂತ. ನೀವೇನಾದರೂ ಅವರ ಪಕ್ಷಕ್ಕೆ ಸೇರುತ್ತೀರಾ?

ಅಧ್ಯಕ್ಷರು :— ಎನಪ್ಪ, ಬೆಳಿಗ್ಗೆ ನಿಮಗೊಂದು ಚಾನ್ಸ್ ಕೊಡಲಿಲ್ಲ ಅಂದ ಮಾತ್ರಕ್ಕೆ ಇಷ್ಟೊಂದು ಸಿಟ್ಟು ಇಟ್ಟುಕೊಂಡಿದ್ದೀರಲ್ಲ ಮಾರಾಯರೆ ನೀವು.

ಶ್ರೀ ವಾಟಾಳ್ ನಾಗರಾಜ್ :— ನಾನಂತೂ ಒಂದು ವಿಚಾರ ಮನಸಿನಲ್ಲಿಟ್ಟುಕೊಂಡಿದ್ದೇನೆ, ಅವರು ಯಾವುದೇ ಪಕ್ಷದೊಳಗಿದ್ದರೂ ಮುಂದೆ ಅವರೇ ಸ್ವೀಕರ್ ಆಗಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವಂತೂ ಖಾಯಂ ಅಲ್ಲೇ, ಸ್ವಲ್ಪ ಅವಕಾಶ ಮಾಡಿಕೊಡಿ ನನಗೆ.

ಶ್ರೀ ವಾಟಾಳ್ ನಾಗರಾಜ್ :— ಅದನ್ನು ನಾನು ಒಪ್ಪಲು ತಯಾರಿಲ್ಲ. ಒಂದು ಕಡೆ ನಿಮಗೆ ಕರುಣೇನೂ ಇಲ್ಲ, ಒಂದು ಕಡೆ ಸ್ನೇಹನೂ ಇಲ್ಲ ಅಥವಾ ವಸ್ತು ಸ್ಥಿತಿಯನ್ನೂ ಮರೆತಿದ್ದೀರಿ. ಅದನ್ನು ಹೇಳುವುದಕ್ಕಾಗುವುದಿಲ್ಲ; ಯಾರ್ಯಾರು ಆ ಸ್ಥಾನದಲ್ಲಿ ಬರಬಾರದು ಅಂತ ಇದೆಯೋ ಅಂಥವರೆಲ್ಲ ಬಂದು ಹೋಗಿದ್ದಾರೆ. ಅದ್ದರಿಂದ ಯಾರಿಗೆ ಯಾವ ಗಳಿಗೆಯಲ್ಲಿ ಅಂತಹ ಸ್ಥಿತಿ ಬರುತ್ತದೆ ಅಂತ ಹೇಳಲಾಗುವುದಿಲ್ಲ ಮಾನ್ಯ ಖರ್ಗೆ ಸಾಹೇಬರೇ. ನಾವೂ ನೀವೇ ಒಂದಾದರೂ ಆಗಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅನುಭವಶಾಲಿಗಳಾದ ನೀವು ಈ ಸಭೆಯಲ್ಲಿರಬೇಕು; ಅದು ನಮ್ಮೆಲ್ಲರ ಬಯಕೆ. ಏತಕ್ಕೆ ನಾನು ಈ ಮಾತನ್ನು ಹೇಳಿದೆ ಅಂದರೆ ಇದು ಜೋಕ್ ಅಂತ ಅಲ್ಲ, ಶ್ರೀ ಎಂ.ಎಸ್. ಪಾಟೀಲರು ಇದನ್ನು ಮಂಡಿಸುವಾಗ ಸಹಜವಾಗಿ

ಇದಕ್ಕೆ ವಿರೋಧವಾಗಿ ಬಿಜೆಪಿಯವರೂ ಕೆಲವು ಸಲಹೆ ಕೊಡಬಹುದು. ನಾಳೆ ಅವರು ಸಮಾನ ಮನಸ್ಕರ ಸಭೆಯಲ್ಲಿ ಒಂದು ತೀರ್ಮಾನ ತೆಗೆದುಕೊಡ ಮೇಲೆ ಲೋಕಶಕ್ತಿಗೆ ಹೋಗಬೇಕೂಂತ, ಅಂದರೆ ಲೋಕಶಕ್ತಿ ಬಿಜೆಪಿ ಎಲ್ಲ ಒಂದೇ; ಅದಕ್ಕಾಗಿ ಪ್ರೀತಿ ನನ್ನ ಜೊತೆ, ಲಗ್ನ ಇನ್ನೊಬ್ಬರ ಜೊತೆ ಅನ್ನುವಂತೆ ಆಗಬಾರದು. ಆದ್ದರಿಂದ ಸಧ್ಯಕ್ಕೆ ಈ ಬಿಲ್ಲನ್ನು ಕೈಬಿಡಿ, ಮುಂದೆ ಬಂದವರು ಮಾಡುತ್ತಾರೆ. ಅದಕ್ಕೆ ನಮ್ಮ ಕಡೆ ಒಂದು ಮಾತು ಹೇಳುತ್ತಾರೆ, ಕೆಎಸ್ಆರ್‌ಟಿಸಿಯಲ್ಲಿ ಡಿಸ್ಮಿಸ್ ಆದವರನ್ನು ತೆಗೆದುಕೊಳ್ಳದಿದ್ದರೆ ಅವನು ಏನಂತಿದ್ದ ಅಂದರೆ 'ಚಲಿತೋ ಚಲ್ನೈ.. ಮಹಮದಾಲಿ, ನಹಿ ಚಲಿತೊ ನೊ ಉಸ್ಮಾನಲಿ' ಅಂತ, ಹಾಗೆ ಇವರು ಚಲಿತೊ ಚಲಿ ಜೆಎಚ್ ಪಟೇಲ್, ನಹಿ ಚಲಿತೊ ಜೊ ಲೋಕಶಕ್ತಿ. ಅದಕ್ಕೆ ಈ ಬಿಲ್ಲನ್ನು ಆಮೇಲೆ ಪರಿಚಯಿಸಿ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಬೈರೇಗೌಡರು ನಾವು ಎಲ್ಲಿದ್ದೇವೋ ಅಲ್ಲೇ ಇರ್ತೀವೆ ಅಂತ ಹೇಳುತ್ತಿದ್ದಾರೆ. ನಿನ್ನೆ ತಾನೇ ಮಾನ್ಯ ರೋಷನ್ ಬೇಗ್ ನಿಮ್ಮನ್ನು ಬಿಟ್ಟು ಹೋದರು. ಅವರು ಎಲ್ಲಿ ಹೋಗುತ್ತಾರೆ ಅಂತ ಇನ್ನೂ ಗೊತ್ತಿಲ್ಲ. ನಿಮ್ಮಲ್ಲಿ ಕೆಲವರು ಲೋಕಶಕ್ತಿ ಟ್ರೈನ್ ಹತ್ತಬೇಕೂಂತ ಕಾದಿದ್ದಾರೆ, ಇನ್ನು ಕೆಲವರು ಕಾಂಗ್ರೆಸ್ ಟ್ರೈನೇ, ಬಿಜೆಪಿ ಟ್ರೈನ್ ಹತ್ತಬೇಕು ಅಂತ ಕಾದಿದ್ದಾರೆ. ಇವರೂ ಕಾಯ್ದುಕೊಂಡು ಕುಳಿತಿದ್ದಾರೆ, ನೀವೆಷ್ಟು ಬೇಗ ಬಂದರೆ ಸಾಕು ಅಂತ ನನಗನ್ನಿಸುತ್ತದೆ, ಒಬ್ಬ ಮಾನ್ಯ ಸಚಿವರು ರಾಜೀನಾಮೇ ಕೊಟ್ಟಿದ್ದಾರೆ, ಆ ವಿಚಾರದಲ್ಲಿ ಸದನಕ್ಕೂ ಗೊತ್ತಾಗಿಲ್ಲ; ಅದೇನು ಸಮಾಚಾರ ಅಂತ ಸದನಕ್ಕೆ ತಿಳಿಯಬೇಕಲ್ಲ! ಮಾನ್ಯ ಅಧ್ಯಕ್ಷರೇ, ಪ್ರಾಮಾಣಿಕವಾಗಿ ಕಳಕಳಿಯಿಂದ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ, ಈ ಸದನಕ್ಕೆ ಈ ವಿಚಾರ ತಿಳಿಸುವುದು ಬೇಡವೇ? ಮಾನ್ಯ ಪ್ರವಾಸ್ಯೋದ್ಯಮ ಸಚಿವರು ರಾಜೀನಾಮೆ ಕೊಟ್ಟಿರುವುದರ ಬಗ್ಗೆ ಅದನ್ನು ಒಪ್ಪಿಕೊಂಡಿದ್ದೇವೆ ಅಂತ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೇ; ಈ ಸದನಕ್ಕೆ ಯಾರಾದರೂ ದಯವಿಟ್ಟು ಉತ್ತರ ಕೊಡಿ.

ಅಧ್ಯಕ್ಷರು :— ಅವರ ರಾಜೀನಾಮೆಯನ್ನು ಒಪ್ಪಿಕೊಳ್ಳುವ ಅಧಿಕಾರವಿರುವುದು ಮಾನ್ಯ ರಾಜ್ಯಪಾಲರಿಗೆ ಅದಕ್ಕೆ ಶಿಫಾರಸ್ಸು ಮಾಡುವ ಅಧಿಕಾರ ಇರುವುದು ಮಾನ್ಯ ಮುಖ್ಯಮಂತ್ರಿಗಳಿಗೆ. ಮಾನ್ಯ ರಾಜ್ಯಪಾಲರಿಗೆ ಆ ರಾಜೀನಾಮೆ ಪತ್ರ ಹೋಗಿ ಅವರು ಅದಕ್ಕೆ ಒಪ್ಪಿಗೆ ಕೊಟ್ಟು ಅವರು ಆ ಜವಾಬ್ದಾರಿಯಿಂದ ಮುಕ್ತರಾಗಿದ್ದಾರೆ ಅಂತ ಆದರೆ, ಆ ಸಮಾಚಾರ ಇಲ್ಲಿಗೆ ಬಂದೇ ಬರುತ್ತದೆ, ಅವರೇ ಈ ಸದನಕ್ಕೆ ತಿಳಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಪ್ರವಾಸ್ಯೋದ್ಯಮ ಸಚಿವರು ರಾಜೀನಾಮೆ ಕೊಟ್ಟರುವುದು ಸಣ್ಣ ವಿಚಾರವೇ?

ಅಧ್ಯಕ್ಷರು :— ಮಾನ್ಯ ವರದೇಗೌಡರೇ ಇವರಿಗೆ ನಾವು ಏನು ಹೇಳುವುದು?

ಶ್ರೀ ಸಿ.ಆರ್. ಸಗೀರ್ ಅಹಮದ್:— ನಾಣಯ್ಯನವರನ್ನು ಕೇಳಿದರೆ, ಅವರು ರಾಜೀನಾಮೆ ಕೊಟ್ಟರು ಅಂತ ಕರೆಕ್ಟ್ ಆಗಿ ಅವರಿಗೆ ಗೊತ್ತಿದೆ, ಈಗ ರಾಜೀನಾಮೆ ಕೊಟ್ಟಿರುವವರ ಬಗ್ಗೆಯೂ ಸಹ ಅವರಿಗೆ ಮಾಹಿತಿ ಇದೆ.

ಶ್ರೀ ವಾಟಾಳ್ ನಾಗರಾಜ್:— ಇದನ್ನು ಲಘುವಾಗಿ ತೆಗೆದುಕೊಳ್ಳಬಾರದು. ಈ ಸದನಕ್ಕೆ ಆ ವಿಚಾರವನ್ನು ಹೇಳಬೇಕಲ್ಲ, ನಮ್ಮ ಒಬ್ಬ ಮಾನ್ಯ ಸಚಿವರು ರಾಜೀನಾಮೆ ಇತ್ತಿದ್ದಾರೆ, ಆ ಜವಾಬ್ದಾರಿಯನ್ನು ಇಂತಹವರಿಗೆ ವಹಿಸಿದ್ದೇವೆ ಎಂದು. ಆ ಇಲಾಖೆ ಅನಾಥವಾಗಿದೆಯೇ?

ಅಧ್ಯಕ್ಷರು:— ಮಾನ್ಯ ಸಚಿವರು ರಾಜೀನಾಮೆ ಕೊಟ್ಟಿದ್ದು ಅದು ಅಂಗೀಕಾರ ಆಗುವವರೆಗೆ ಅವರು ಅಧಿಕಾರದಲ್ಲಿದ್ದಂತೆಯೇ ಆಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್:— ಮಾನ್ಯ ವಕ್ಫ್ ಇಲಾಖೆಯ ಮಂತ್ರಿಗಳು ಯಾರು ಎಂದು ನಾವು ಬೆಳಿಗ್ಗೆಯಿಂದ ಹುಡುಕಾಡಿದೆವು. ಆದರೆ ಪತ್ರಿಕೆಯಲ್ಲಿ ಇವತ್ತು ಏನಿದೆ ಎಂದರೆ, ಮಾನ್ಯ ರೋಷನ್ ಬೇಗ್‌ರವರೇ ವಕ್ಫ್ ಮಂತ್ರಿಗಳು ಎಂದು ಹೇಳಿ ಯಾವುದೋ ಒಂದು ಪತ್ರಿಕೆಯಲ್ಲಿ ಒಂದು ಜಾಹಿರಾತು ಬಂದಿದೆ. ಈಗ ಇದನ್ನು ಹೇಗೆ ನಾವು ನಂಬುವುದು? ಮಾನ್ಯ ನಾಣಯ್ಯನವರು ದಯಮಾಡಿ ಹೇಳಬೇಕು; ಏನು ಅವರ ರಾಜೀನಾಮೆಯನ್ನು ಒಪ್ಪಿದ್ದಿರೊ ಇಲ್ಲವೊ?

ಶ್ರೀ ವಾಟಾಳ್ ನಾಗರಾಜ್:— ಮಾನ್ಯ ನಾಣಯ್ಯನವರು ಮೌನವಾಗಿ ಕುಳಿತಿದ್ದಾರೆ. ಅವರು ತಮ್ಮ ಮೌನವರನ್ನು ಮುರಿಯಬೇಕೆಂದು ಇಲ್ಲ. ಆ ಸಂಸದೀಯ ಸಚಿವರ ಕರ್ತವ್ಯವದು; ಈ ಸದನಕ್ಕೆ ಇಂಥ ವಿಚಾರಗಳನ್ನು ಹೇಳುವ ಜವಾಬ್ದಾರಿ ಸಂಸದೀಯ ಸಚಿವರದು. ಅವರು ಇದನ್ನು ಮೊದಲೇ ಬೆಳಿಗ್ಗೆ ಈ ಸದನಕ್ಕೆ ಪ್ರಶ್ನೋತ್ತರ ವೇಳೆ ಮುಗಿದ ನಂತರ ಹೇಳಬೇಕಾಗಿತ್ತು. ಅವರು ಹೇಳುತ್ತಾರೆಂದು ನಾನು ಕಾದಿದ್ದೆ. ಈಗಲಾದರೂ ಅವರು ಸತ್ಯವನ್ನು ಬಯಲು ಮಾಡಬೇಕು.

ಅಧ್ಯಕ್ಷರು:— ಮಾಮೂಲಿಯಾಗಿ ಹೇಳಿದಂತೆ ಹೇಳಬೇಕು.

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ರಾಜೀನಾಮೆಯನ್ನು ಸಲ್ಲಿಸಬೇಕಾದರೆ ಅದನ್ನು ಅವರು ಅಧ್ಯಕ್ಷರಿಗೆ ಕಳುಹಿಸಿ ಕೊಡಬೇಕು. ಅಧ್ಯಕ್ಷರು ಅದನ್ನು ಅಂಗೀಕಾರ ಮಾಡಿದ ಮೇಲೆ ಅವರು ಅದನ್ನು ಹೇಳುತ್ತಾರೆ. ಮಾನ್ಯ ಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕಾಗಿದ್ದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡಬೇಕು. ಈಗಾಗಲೇ ಸಭಾಧ್ಯಕ್ಷರು ಹೇಳಿದ್ದಾರೆ; ಆ ತರಹ ಏನಾದರೂ ಪರಿಸ್ಥಿತಿ ಬಂದಾದ ಮೇಲೆ ಅದು ಅಂಗೀಕಾರ ಆದ ಮೇಲೆ ಬಹುಶ: ಅದಕ್ಕೆ ಚಾಲನೆ ಸಿಗುತ್ತದೆ. ಆ ಸಂದರ್ಭ ಬಂದಾಗ ನಿಮಗೂ

ನಾವು ತಿಳಿಸುತ್ತೇವೆ ಎಂದು.

ಶ್ರೀ ಅರಗ ಜ್ಞಾನೇಂದ್ರ :— ಈಗ ಆ ಖಾತೆಗೆ ಯಾರು ಮಂತ್ರಿ ಎಂದು ಹೇಳಿಬಿಡಿ.

ಶ್ರೀ ಎಂ.ಸಿ. ನಾಣಯ್ಯ :— ಇವತ್ತಿಗೆ ನಾನು ಹೇಳುತ್ತಿದ್ದೇನೆ, ನಮ್ಮಲ್ಲಿ ಯಾರೆಲ್ಲ ಮಂತ್ರಿಗಳು ನಮ್ಮ ಪಟ್ಟಿಯಲ್ಲಿ ಇದ್ದಾರೆ, ಅವರೆಲ್ಲಾ ಮಂತ್ರಿಗಳಾಗಿದ್ದಾರೆ. ಇನ್ನು ರಾಜೀನಾಮೆ ಕೊಟ್ಟವರು ಯಾರಿದ್ದಾರೆ ಅವರ ರಾಜೀನಾಮೆ ಪತ್ರ ಮೊದಲು ಮಾನ್ಯ ಮುಖ್ಯಮಂತ್ರಿಗಳಿಗೆ ಹೋಗಿ, ಅವರು ಶಿಫಾರಸ್ಸು ಮಾಡಿದ ಮೇಲೆ ಅದು ಮಾನ್ಯ ರಾಜ್ಯಪಾಲರ ಹತ್ತಿರ ಹೋಗಿ, ಅವರು ಅದಕ್ಕೆ ಅಂಗೀಕಾರ ಕೊಟ್ಟಮೇಲೆ ಅಫಿಷಿಯಲ್ ಆಗಿ ಇಷ್ಯು ಮಾಡುತ್ತೇವೆ. ಆ ಸಂದರ್ಭದಲ್ಲಿ ಮಾತ್ರ ಅವರು ಸೀಜ್ ಆಗುತ್ತಾರೆ; ಅಲ್ಲಿಯವರೆಗೂ ಆಗುವುದಿಲ್ಲ.

ಶ್ರೀ ಮಾಟಾಳ್ ನಾಗರಾಜ್ :— ಈ ವಿಚಾರವನ್ನು ಪತ್ರಿಕೆಗಳಿಗೆ ತಾವೇ ಸಹಿ ಹಾಕಿ ತಿಳಿಸಿದ್ದಾರೆ; ಪತ್ರಿಕೆಗಳಿಗೆ ಮಾನ್ಯ ರೋಷನ್ ಬೇಗ್‌ರವರು ಪ್ರವಾಸ್ಯೋದ್ಯಮ ಸಚಿವರು ಸ್ವತ: ಸಹಿ ಹಾಕಿ 'ನಾನು ರಾಜೀನಾಮೆ ಕೊಟ್ಟಿದ್ದೇನೆ' ಎಂದಿದ್ದಾರೆ. ಇದು ಪತ್ರಿಕೆಗಳಿಗೆ ಹೋಗಿದೆ. ಈ ಸದನದಲ್ಲಿ ಸತ್ಯಕ್ಕೆ ದೂರವಾಗಿ ಮಾನ್ಯ ಸಂಸದೀಯ ಸಚಿವರು ದಾರಿ ತಪ್ಪಿಸುತ್ತಿದ್ದಾರೆ ಇದರಲ್ಲಿ ಏನಿದೆ? ಇವತ್ತಲ್ಲ ನಾಳೆ ಗೊತ್ತಾಗೇ ಗೊತ್ತಾಗುತ್ತದೆ.

ಅಧ್ಯಕ್ಷರು :— ಅವರು ದಾರಿ ತಪ್ಪಿಸಲಿಲ್ಲ ಮಾನ್ಯ ಮಾಟಾಳ್‌ರವರೇ, ಅವರು ಏನು ಹೇಳಿದರು ಎಂದರೆ, ರಾಜೀನಾಮೆ ಪತ್ರ ಮಾನ್ಯ ರಾಜ್ಯಪಾಲರ ಗಮನಕ್ಕೆ ಹೋಗಿ, ಮಾನ್ಯ ರಾಜ್ಯಪಾಲರು ಅದಕ್ಕೆ ಅಂಗೀಕಾರವನ್ನು ಕೊಟ್ಟು ಅದು ರಾಜ್ಯಪತ್ರದಲ್ಲಿ ನೋಟೀಫಿಕೇಷನ್ ಆಗುವವರೆಗೆ ಅವರೇ ಮಂತ್ರಿಯಾಗಿ ಮುಂದುವರಿದಿರುತ್ತಾರೆ. ಯಾವ ಗಳಿಗೆ ಆ ಬಗ್ಗೆ ನೋಟೀಫಿಕೇಷನ್ ಇಷ್ಯೂ ಆಗುತ್ತದೆಯೋ ಅಲ್ಲಿಗೆ ಅವರು ಜವಾಬ್ದಾರಿ ಮುಕ್ತಾಯವಾಗುತ್ತದೆ. ಅಂದರೆ ಅಲ್ಲಿಯವರೆಗೂ ಅವರೇ ಮಂತ್ರಿಯಾಗಿ ಮುಂದುವರಿದಿರುತ್ತಾರೆ.

ಶ್ರೀ ಮಾಟಾಳ್ ನಾಗಾರಾಜ್ :— ಈ ಸದನಕ್ಕೆ ಬರುವುದಿಲ್ಲವೆಂದು ತಮಗಾದರೂ ಅವರು ಹೇಳಿದ್ದಾರೆಯೇ ಸ್ವಾಮಿ?

ಅಧ್ಯಕ್ಷರು :— ಬಹಳ ಜನ ಹೇಳುವುದಿಲ್ಲ.

ಶ್ರೀ ಮಾಟಾಳ್ ನಾಗರಾಜ್ :— ಬಹಳ ಜನರ ವಿಚಾರ ಬೇಡಿ ಸ್ವಾಮಿ.

ಅಧ್ಯಕ್ಷರು :— ನಿವೊಬ್ಬರು ರೆಗ್ಯೂಲರ್ ಆಗಿ ನನಗೆ ಹೇಳುವುದು, ಮಾಡುವುದು ಮಾಡುತ್ತೀರಿ. ನನ್ನ ಬಳಿಗೆ ಬರುವುದು ಇರತಕ್ಕಂಥ ವಿಷಯ ಮಾತನಾಡುವುದು ಅವೆಲ್ಲಾ ಮಾಡುತ್ತೀರಿ. ಮಾನ್ಯ ಖರ್ಗೆಯವರು ನೀವು ಇದ್ದಾಗ ಸ್ವಲ್ಪ ಹೆದರಿ ಬರುತ್ತಾರೆ. ನೀವು

ಇಲ್ಲದೆ ಇದ್ದಾಗ ಧೈರ್ಯವಾಗಿ ಬರುತ್ತಾರೆ. ಮಾನ್ಯ ಎಂ.ಎಸ್. ಪಾಟೀಲರೇ, ತಾವು ಬಿಲ್ಲಿನ ಬಗ್ಗೆ, ಸೈಲಿಯಂಟ್ ಫೀಚರ್ಸ್ ಬಗ್ಗೆ ವಿವರಣೆ ಕೊಡಿ ಆಮೇಲೆ ಬೇಕಾದರೆ ಈ ಬಗ್ಗೆ ಕನ್‌ಸಿಡರೇಷನ್ ನಾಳೆ ಮಾಡೋಣ.

4. ಶಾಸನ ರಚನೆ

ಪರ್ಯಾಲೋಚನಾ ಪ್ರಸ್ತಾವ

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 1998.

+ಶ್ರೀ ಎಂ.ಎಸ್. ಪಾಟೀಲ್ (ಮಾನ್ಯ ನಗರಾಭಿವೃದ್ಧಿ ಸಚಿವರು) :— ಮಾನ್ಯ ಅಧ್ಯಕ್ಷರೇ, ಈ ಬಿಲ್ ತರುವ ಸಂದರ್ಭದಲ್ಲಿ ಈ ನಡುವೆ ಕೆಲವೊಂದು ವಿಷಯಗಳು ಪ್ರಸ್ತಾಪವಾದವು. ಆ ರೀತಿ ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ನನ್ನ ವಿಷಯವೂ ಅದರಲ್ಲಿ ಪ್ರಸ್ತಾಪವಾದವು. ಅದು ರಿಕಾರ್ಡ್‌ನಲ್ಲಿದೆ. ಇವರು ಇನ್ನು 4 ದಿವಸದಲ್ಲಿ ಎಲ್ಲಿಗೆ ಹೋಗುತ್ತಾರೋ ಏನೋ ಎನ್ನುವ ಒಂದು ವಿಷಯ ಪ್ರಸ್ತಾಪವಾಯಿತು. ಈ ಸರ್ಕಾರ ಉಳಿಯುತ್ತದೋ ಇಲ್ಲವೋ ಎನ್ನುವ ಕೆಲವರ ಚಿಂತನೆಗಳು ನಡೆಯಿತು. ಆದ್ದರಿಂದ ನಿಮ್ಮ ಮೂಲಕ ನಾನು ಇಲ್ಲಿ ಏನನ್ನು ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ ಎಂದರೆ ಈ ಸರ್ಕಾರ ಭದ್ರವಾಗಿದೆ. ಈ ಸರ್ಕಾರಕ್ಕೆ ಏನೂ ಆಗುವುದಿಲ್ಲ. ಇನ್ನು 4 ದಿವಸವಲ್ಲ, ಇದು ಅವಧಿ ಮುಗಿಯುವರರೆಗೂ ಈ ಸರ್ಕಾರವಿರುತ್ತದೆ. ಆಮೇಲೂ ಸಹಿತ ನಾವು ಇಲ್ಲೇ ಬಂದು ಕುಳಿತುಕೊಳ್ಳುತ್ತೇವೆ ಎನ್ನುವ ವಿಶ್ವಾಸವೂ ನಮಗೆ ಇದೆ ಎಂದು ಹೇಳುತ್ತಿದ್ದೇನೆ. ಇದರ ಜೊತೆಗೆ ಈ ವಿಚಾರದಲ್ಲಿ ಗೊಂದಲಕ್ಕೆ ಬೀಳತಕ್ಕಂಥದ್ದು ಅನುಮಾನ ಪಡುವುದು ಏನೂ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ.

(ಆ ಹಂತದಲ್ಲಿ ಮಾನ್ಯ ಶಿವಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್ :— ತಮ್ಮ ಸಮಾನ ಮನಸ್ಕರ ಸಭೆಯಲ್ಲಿ ತಾವು ಹೇಳಿದ್ದೆಲ್ಲ ಗಾಳಿಗೆ ತೂರಿತು ಎಂತಲೇನು?

ಶ್ರೀ ಎಂ.ಎಸ್. ಪಾಟೀಲ್ :— ನಾನು ಹೇಳುವವರೆಗೂ ಕೇಳಿ. ನಾನು ಇನ್ನು ನನ್ನ ಮಾತನ್ನು ಪೂರ್ಕಿಸಿಲ್ಲ. ಆಮೇಲೆ ಇಲ್ಲಿ ಅಭಿಪ್ರಾಯಗಳ ಬಗ್ಗೆ ಬಂದಿದೆ. ಹಲವಾರು ಜನ ತಮ್ಮಗಳ ಅಭಿಪ್ರಾಯಗಳನ್ನು ವ್ಯಕ್ತಮಾಡುವ ಸ್ವಾತಂತ್ರ್ಯ ಅವರಿಗೆ ಇದೆ ಎಂದು ನಮ್ಮಲ್ಲರ ಭಾವನೆ. ಇಲ್ಲಿ ಎಲ್ಲಿ ಅಭಿಪ್ರಾಯಗಳಿರುತ್ತವೋ ಅಲ್ಲಿ ಕೂಡ ಭಿನ್ನಾಭಿಪ್ರಾಯಗಳಿರುತ್ತವೆ. ಎಲ್ಲಿ ಅಭಿಪ್ರಾಯಗಳಿರುವುದಿಲ್ಲವೋ ಅಲ್ಲಿ ಭಿನ್ನಾಭಿಪ್ರಾಯಗಳ ಪ್ರಶ್ನೆ ಬರುವುದಿಲ್ಲ. ಇಲ್ಲಿ ಯಾರಾದರೂ ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುವುದಾಗಲಿ, ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕಾಗಲಿ ಅವಕಾಶವಿದೆ, ಹಾಗೆಯೇ ಅಭಿಪ್ರಾಯಗಳು